# ಸಂಸ್ಕೃತ – ಸಂಸ್ಕೃತಿ – ಸಂಸ್ಕಾರ

**ವಿದೂಷಿ ಚೇತನಾ ವಸಂತ**
**ಸಂಸ್ಕೃತ ಉಪನ್ಯಾಸಕಿ**
**ಮಹಾಗಣಪತಿ ಆರ್ಯುವೇದಿಕ್ ಕಾಲೇಜ್**
**ಧಾರವಾಡ**
**ಸಂಹಿತಾ ಸಿದ್ಧಾಂತ ವಿಭಾಗ**
**ಮೊ: 9731641458**
**E.mail:chethana.Vasanth83@gmail.com**

**ಪೀಠಿಕೆ:–**

**ಭಾಷಾಷು ಮುಖ್ಯ ಮಧುರಾ**
**ದಿವ್ಯಾ ಗೀರ್ವಾಣಭಾರತೀ।**
**ತಸ್ಯಾಂ ಹಿ ಕಾವ್ಯಂ ಮಧುರಂ**
**ತಸ್ಮಾದಪಿ ಸುಭಾಷಿತಮ್॥**

ಎಲ್ಲಾ ಭಾಷೆಗಳಲ್ಲಿ ಪ್ರಧಾನವೂ ಅತ್ಯಂತ ಮಧುರವೂ ಆದದ್ದು, ದೇವ ಭಾಷೆಯಾದ ಸಂಸ್ಕೃತ ಅದರಲ್ಲಿಯೂ ಕಾವ್ಯಗಳು ಅತ್ಯಂತ ರಮ್ಯ, ಅಂತಹ ಕಾವ್ಯಗಳಲ್ಲಿ ಸುಭಾಷಿತಗಳು ಅತಿ ಮಧುರವಾಗಿವೆ.

ಸಂಸ್ಕೃತ ಭಾಷೆಯು ಬಹಳ ಸರಳ, ಮನೋಜ್ಞ, ಸುಂದರವಾಗಿದೆ. ನಮ್ಮ ದೇಶದ ಅಮೂಲ್ಯ ಸಂಪತ್ತುಗಳಲ್ಲೊಂದಾದ ಸಂಸ್ಕೃತವು ದೇವ ಭಾಷೆಯೆಂದು ಪ್ರಸಿದ್ಧವಾಗಿದೆ. ಅಷ್ಟೇ ಅಲ್ಲದೇ ಎಲ್ಲ ಭಾಷೆಗಳಿಗೂ ತಾಯಿಭಾಷೆ ಸಾಮಾನ್ಯವಾಗಿ ಎಲ್ಲ ಭಾರತೀಯ ಭಾಷೆಗಳಲ್ಲೂ ನಾವು ಸಂಸ್ಕೃತದ ಶಬ್ಧಭಂಡಾರವನ್ನೇ ನೋಡಬಹುದು. ನಮ್ಮ ಮಾತೃಭಾಷೆಗೂ ತಾಯಿಯ ಸ್ಥಾನದಲ್ಲಿರುವ ಸಂಸ್ಕೃತಭಾಷೆಯನ್ನು ನಾವೆಲ್ಲರೂ ಅಧ್ಯಯನ ಮಾಡಬೇಕು. ಈ ಭಾಷೆಯನ್ನು ಕಲಿಯುವುದು ಬಹಳ ಸುಲಭ ಇದರ ಕಲಿಕೆ ಎಲ್ಲರಿಗೂ ಸಾಧ್ಯ **"ಸಂಸ್ಕೃತಭಾಷೆಯ ಅಧ್ಯಯನವಿಲ್ಲದೆ ಮಾನವ ಸುಶಿಕ್ಷಿತನಾಗಲಾರ"** ಎಂಬುದು ಗಾಂಧೀಜಿಯವರ ನುಡಿಯೊದರೆ, ಜಗತ್ತಿನಲ್ಲಿರುವ ಎಲ್ಲ ಭಾಷೆಗಳಿಗಿಂತ ಶ್ರೇಷ್ಠವಾದದ್ದು ಸಂಸ್ಕೃತಭಾಷೆ ಎಂಬುದು ಮ್ಯಾಕ್ಸಮುಲ್ಲರ್ ಹೇಳಿಕೆ. ಲಂಡನ್‌ನ ಸೇಂಟ್ ಜಾನ್ಸ್ ಇಂಡಿಪೆಂಡೆನ್ಸ್ ಸ್ಕೂಲ್‌ನಂತಹ ಅನೇಕ ವಿದೇಶಿ ಶಾಲೆಗಳಲ್ಲಿ ಸಂಸ್ಕೃತದ ಕಲಿಕೆ ಅನಿವಾರ್ಯವಾಗಿದೆ.

**ಸಂಸ್ಕೃತ:– ನಿತ್ಯ ಬಳಕೆಯಲ್ಲಿ ಸಂಸ್ಕೃತ**

ಪ್ರಾಚೀನ ಕಾಲದಿಂದ ಸಂಸ್ಕೃತವು ಭಾರತದ ರಾಷ್ಟೀಯ ಭಾಷೆಯಾಗಿದೆ. ನಮ್ಮ ದೇಶದ ಎಲ್ಲ ಭಾಷೆಗಳ ಮೇಲೆ ಸಂಸ್ಕೃತವು ಗಾಢವಾದ ಪ್ರಭಾವವನ್ನು ಬೀರಿದೆ. ನಮ್ಮ ಭಾಷೆಗಳ ಪದ ಸಂಪತ್ತಿಗೆ, ವ್ಯಾಕರಣ, ಭಾಷಾಶಾಸ್ತ್ರಗಳಿಗೆ ಸಂಸ್ಕೃತದ ಕೊಡುಗೆ ಅಪಾರವಾದದ್ದು, ಸಂಸ್ಕೃತವನ್ನು ತಿಳಿಯದಿದ್ದರೆ ಭಾರತದ ಸಂಸ್ಕೃತಿಯ ಮೂಲವನ್ನು ತಿಳಿಯುವುದು ಅಸಾದ್ಯ ದೇಶದಾದ್ಯಂತ ಕೇಳಿ ಬರುವಂತೆ, ಇಡೀ ಜಗತ್ತೀನ ಅತ್ಯಂತ ಪ್ರಾಚೀನ ಜೀವಂತ ಭಾಷೆಯೆಂದರೆ ಅದು ಸಂಸ್ಕೃತ.

ಭಾರತೀಯ ಕಾಲಗಣೆಯ ಪದ್ಧತಿ ವಿಶ್ವಕ್ಕೆ ಭಾರತದ ಕೊಟ್ಟ ಅಪೂರ್ವ ಕೊಡುಗೆ ಭೂಮಿ, ಚಂದ್ರ, ನಕ್ಷತ್ರಗಳ ಪಂಚಾಂಗದ ಆಧಾರದ ಮೇಲೆ ವೈಜ್ಞಾನಿಕ ರೀತಿಯಲ್ಲಿ ಮಾಸ, ಪಕ್ಷ, ತಿಥಿ, ವಾರ ಇದಲ್ಲವೊ ಸಂಸ್ಕೃತ ಜ್ಞಾನದ ಆಧಾರದ ಮೇಲೆ ನಾವೆಲ್ಲ ತಿಳಿದುಕೊಳ್ಳುತ್ತೀದ್ದೇವೆ.

ಉದಾಹರಣೆ : ನಾವು ನಿತ್ಯ ಮಾಡುವ ಪೂಜಾ ವಿಧಾನ, ಸಂಕಲ್ಪ ದೇವರಸ್ತುತಿ ಅಷ್ಟೋತ್ತರಗಳು ಇವೆಲ್ಲದರಲ್ಲಿ ನಾವು ಸಂಸ್ಕೃತವನ್ನು ಉಪಯೋಗಿಸುತ್ತೇವೆ. ಅಷ್ಟೇ ಏಕೆ ನಮ್ಮ ದಿನಚರಿ ಪ್ರಾರಂಭವಾಗುವುದೇ ಬೆಳಿಗ್ಗೆ: **ಕರಾಗ್ರೇ ವಸತೇ ಲಕ್ಷ್ಮೀ:...** ಶ್ಲೋಕದಿಂದ ಹಿಡಿದು ರಾತ್ರಿ ಮಲಗುವ ಮುನ್ನ ಹೇಳುವ **ರಾಮಂ ಸ್ಕಂದಂ ಹನುಮಂತಂ** ವರೆಗೂ ಸಂಸ್ಕೃತ ಮಯವಾಗಿರುತ್ತದೆ. ಇದಷ್ಟೇ ಅಲ್ಲದೆ ಮನುಷ್ಯನ ಜೀವತಾವಧಿಯಲ್ಲಿ ಬರುವ ಷೋಡಶ ಸಂಸ್ಕಾರಗಳಾದ **ಗರ್ಭದಾನದಿಂದ** ಹಿಡಿದು **ಅಂತ್ಯಷ್ಠೆವರೆಗೂ** ಎಲ್ಲಾ ಸಂಸ್ಕಾರಗಳು ಸಂಸ್ಕೃತದಲ್ಲಿ ಹಾಸುಹೂಕ್ಕಾಗಿವೆ ಎನ್ನಬಹುದು.

ಇಂತಹ ಭಾಷೆಯನ್ನು ಇನ್ನೂ ನಾವು ದಿನನಿತ್ಯದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು. ಇಲ್ಲಿ ನಾವು ಕೆಲವು ಶಬ್ಧಗಳ ಅರ್ಥ ತಿಳಿಯುವುದರ ಮೂಲಕ ಸಂಸ್ಕೃತ ಭಾಷೆಯನ್ನು ಕಲಿಯಲು ಆರಂಭಿಸೋಣ.

**ನಿತ್ಯ ಬಳಿಕೆಗೆ ಬೇಕಾಗುವ ಶಿಷ್ಟಾಚಾರ ಪದಗಳು:–**

| | |
|---|---|
| ನಮಸ್ತೇ | – ನಮಸ್ಕಾರ |
| ಸುಪ್ರಭಾತಮ್ | – ಸುಪ್ರಭಾತ |
| ಶುಭ ಮಧ್ಯಾಹ್ನಃ | – ಶುಭಮದ್ಯಾಹ್ನ |
| ಶುಭ ಸಾಯಮ್ | – ಶುಭ ಸಾಯಂಕಾಲ |
| ಶುಭ ರಾತ್ರಿಃ | – ಶುಭರಾತ್ರಿ |
| ಧನ್ಯವಾದಃ | – ಧನ್ಯವಾದ |
| ಸ್ವಾಗತಮ್ | – ಸ್ವಾಗತ |
| ವಂದನಾನಿ | – ವಂದನೆಗಳು |
| ಕೃಪಯಾ | – ದಯವಿಟ್ಟು |
| ಕ್ಷಮ್ಯತಾಮ್ | – ಕ್ಷಮಿಸಿ |

| | |
|---|---|
| ಚಿಂತಾಮಾಸ್ತು | – ಪರವಾಗಿಲ್ಲ |
| ಅವಶ್ಯಕಮ್ | – ಬೇಕು |
| ಅಸ್ತು | – ಆಗಲಿ |
| ಆಗಚ್ಛತು | – ಬನ್ನಿ |
| ಉಪವಿಶತು | – ಕುಳಿತುಕೊಳ್ಳಿ |
| ಅಪಿ ಕುಶಲಮ್? | – ಎಲ್ಲ ಕ್ಷೇಮವೇ? |
| ಆಮ್ ಕುಶಲಮ್ | – ಹೌದು,–ಕ್ಷೇಮ |
| ಸ್ವೀಕರೋತು | – ಸ್ವೀಕರಿಸಿ |
| ಆನಯತು | – ತನ್ನಿರಿ |
| ಪುನಃ ಮಿಲಾಮಃ | – ಮತ್ತೆ ಸಿಗೋಣ |

**ಇದಲ್ಲದರ ಜೊತೆಗೆ ಬಹುಬೇಗ ನಾವು ಸಂಸ್ಕೃತ ಕಲಿಯಬೇಕೆಂದರೆ ನಿತ್ಯವು ನಾವು ಅಳವಡಿಸಿಕೊಳ್ಳಬೇಕಾದ ಕೆಲವು ಚಟುಟಿಕೆಗಳು:–**

- ಸಂಸ್ಕೃತ ಸಂಭಾಷಣ ಶಿಬಿರಕ್ಕೆ ಹೋಗುವುದು.
- ಸಂಸ್ಕೃತ ಜನರನ್ನು ಸಂಪರ್ಕಿಸುವುದು.
- ಸಂಸ್ಕೃತಜ್ಞರೊಂದಿಗೆ ಸಂಸ್ಕೃತದಲ್ಲಿ ವ್ಯವಹರಿಸುವುದು.
- ಪ್ರತಿದಿನ ಸಂಸ್ಕೃತದಲ್ಲಿ ಅಧ್ಯಯನ ಮಾಡುವುದು.
- ಸಂಸ್ಕೃತ ಭೋಜನವನ್ನು ಏರ್ಪಡಿಸುವುದು.
- ಸಂಸ್ಕೃತ ಕಥಾ ಪುಸ್ತಕ ಪಠನ.
- ಸಂಸ್ಕೃತ ಗೃಹ ನಿರ್ಮಾಣ ಮಾಡುವುದು.
- ಮನೆಯಲ್ಲಿ ವಸ್ತುಗಳಿಗೆ ಸಂಸ್ಕೃತ ಶಬ್ಧಗಳನ್ನು ಅಂಟಿಸುವುದು.
- ಪ್ರತಿಮಾಸ ಸಂಸ್ಕೃತ ಪುಸ್ತಕಗಳನ್ನು ಖರೀದಿಸುವುದು.
- ನಮ್ಮಗೆ ಗೊತ್ತಿರುವ ಸಂಸ್ಕೃತವನ್ನು ಬೇರೆಯವರಿಗೆ ಹೇಳಿಕೊಡುವುದು.
- ಸಂಸ್ಕೃತದಲ್ಲಿ ಪತ್ರವನ್ನು ಮತ್ತು ಸಂದೇಶಗಳನ್ನು ಕಳಿಸುವುದು.
- ಸಂಸ್ಕೃತ ಪತ್ರಿಕೆಗಳನ್ನು ಓದುವುದು.

ಈ ರೀತಿಯ ಹತ್ತು ಹಲವು ಚಟುವಟಿಕೆಗಳನ್ನು ನಾವು ನಿತ್ಯ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಬಹು ಬೇಗ ಸಂಸ್ಕೃತವನ್ನು ಕಲಿಯಬಹುದು.

ಇಂತಹ ಶ್ರೇಷ್ಠ ಭಾಷೆಯಾದ ಸಂಸ್ಕೃತವನ್ನು ನಾಲ್ಕು ದಶಕಗಳಿಂದ ಪ್ರಸಾರ ಮಾಡುತ್ತಿರುವ ಸಂಸ್ಕೃತ ಭಾರತೀಯ ಪರಿಚಯವನ್ನೊಮ್ಮೆ ತಿಳಿಯೋಣ ಬನ್ನಿ.

**ಸಂಸ್ಕೃತಿ ಭಾರತೀಯ ಕಿರು ಪರಿಚಯ:**

ಸಂಸ್ಕೃತವನ್ನು ಮತ್ತೊಮ್ಮೆ ಜನಸಾಮಾನ್ಯರ ವ್ಯವಹಾರದ ಭಾಷೆಯನ್ನಾಗಿ ಮಾಡಬೇಕೆಂದು ಇಚ್ಛೆಯಿಂದ ಪ್ರಾರಂಭವಾದ ಆರೆಸ್ಸೆಸನ್ ಸಹ ಸಂಘಟನೆ 'ಸಂಸ್ಕೃತ ಭಾರಂತಿ' 1981 ರಲ್ಲಿ ಆದೇ ತಾನೇ ತಿರುಪತಿಯಿಂದ ಸಂಸ್ಕೃತದ ಅಧ್ಯಯನ ಮುಗಿಸಿಬಂದ ಇಬ್ಬರು ತರುಣರಿಂದ ಈ ಕಾರ್ಯ ಪ್ರಾರಂಭ, ಬೆಂಗಳೂರಿನ ಬಸವಣಗುಡಿಯಲ್ಲಿ ಮೊದಲ 10 ದಿನದಲ್ಲಿ ದಿನಕ್ಕೆರಡು ಗಂಟೆಯಂತೆ ನಡೆಸಲಾಗುವ ಸಂಭಾಷಣಾ ಶಿಬಿರದ ಮೂಲಕ ಸಂಘಟನೆಯ ಆರಂಭ.

ಸಂಸ್ಕೃತದ ಬಗ್ಗೆ ಪ್ರೀತಿ–ಶ್ರದ್ಧೆಯನ್ನು ಇರಿಸಿಕೊಂಡು ಅದರ ಉತ್ಥಾನಕ್ಕಾಗಿ ಪ್ರಯತ್ನ ಪಡುತ್ತಿರುವ ಸಾವಿರಾರು ಸಂಸ್ಥೆಗಳು ದೇಶದಲ್ಲಿ ಇಂದಿಗೂ ಕೆಲಸ ಮಾಡುತ್ತಿವೆ. ಇವತ್ತಿಗೆ ಸಂಸ್ಕೃತವನ್ನು ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 3

ಕೋಟಿಗೂ ಮೀರಿದ್ದು ಅತಿಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿರುವ ಎರಡನೇಯ ದೊಡ್ಡ ಭಾಷೆ (ಮೊದಲ ಸ್ಥಾನದಲ್ಲಿರುವುದು ಇಂಗ್ಲೀಷ್) ಆ ಎಲ್ಲ ಸಂಸ್ಥೆಗಳ ಕಾರ್ಯಕ್ಕೂ ಸಂಸ್ಕೃತ ಭಾರತೀಯ ಕಾರ್ಯಕ್ಕೂ ಒಂದು ಪ್ರಮುಖ ವ್ಯತ್ಯಾಸವಿದೆ. ಸಂಸ್ಕೃತ ಭಾರತೀಯೂ ಎಲ್ಲರಿಗೂ ಸಂಸ್ಕೃತದಲ್ಲಿ ಮಾತನಾಡಲು ಕಲಿಸುತ್ತದೆ. ಸಂಸ್ಕೃತದಲ್ಲಿ ದಿನನಿತ್ಯದ ವ್ಯವಹಾರಗಳನ್ನು ನಡೆಸಲು ಪ್ರೇರೇಪಿಸುತ್ತದೆ. ಈ ವರೆಗೆ ದೇಶಾದ್ಯಂತ ಸುಮಾರು 1,10,000 ಸಂಭಾಷಣಾ ಶಿಬಿರಗಳು ನಡೆದದ್ದು ಅವುಗಳಲ್ಲಿ ಒಂದು ಕೋಟಿ ಜನರು ಭಾಗವಹಿಸಿದ್ದಾರೆ. ಈ ಸಂಬಾಷಣಾ ಶಿಬಿರಗಳಲ್ಲಿ ಮೊದಲ ದಿನದಿಂದಲೇ ಮಮ ನಾಮ... ಭವತಃ ನಾಮ ಕಿಂ? ಭವತ್ಯಾಃ ನಾಮ ಕೀ? ಎಂದು ಪ್ರಶ್ನಿಸಿ ಉತ್ತರ ಪಡೆದು ಅವರಿಂದ ಸಂಸ್ಕೃತದಲ್ಲಿ ಮಾತನಾಡಿಸಲಾಗುತ್ತದೆ. ಹತ್ತು ದಿನಗಳಲ್ಲಿ ದಿನಕ್ಕೆರಡು ಗಂಟೆಯಂತೆ ಕೊಟ್ಟಲ್ಲಿ ನಿರಕ್ಷರಿಯೂ ಸಾಮಾನ್ಯ ವ್ಯವಹಾರವನ್ನು ಸಂಸ್ಕೃತದಲ್ಲಿ ಮಾತನಾಡಲಾಗುವಂತೆ ಇಲ್ಲಿನ ಶಿಕ್ಷಣದ ವ್ಯವಸ್ಥೆ ಇರುವುದು ಸಂಸ್ಕೃತ ಭಾರತೀಯ ವಿಶೇಷತೆ.

1981ರಲ್ಲಿ ಸಂಸ್ಕೃತ ಸಂಭಾಷಣಾ ಶಿಬಿರ ಪ್ರಾರಂಭವಾದಾಗ ಅದು ಕರ್ನಾಟಕದಲ್ಲಿ ಮಾತ್ರ ಇದ್ದು ಹಿಂದು ಸೇವಾ ಪ್ರತಿಷ್ಠಾನದ ಸಂಸ್ಕೃತ ವಿಭಾಗವಾಗಿ ಕಾರ್ಯಾಚರಿಸುತ್ತಿತ್ತು. ಕ್ರಮೇಣ ಕಾರ್ಯ ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ತಲುಪಿ ಪ್ರಾಂತದ ಗಡಿಯನ್ನು ದಾಟಿ ವಿಸ್ತಾರಗೊಂಡಿತು ಆಗ ಅಖಿಲ ಭಾರತೀಯ ಮಟ್ಟದಲ್ಲಿ ಒಂದು ಸಂಸ್ಥೆಯಾಗಬೇಕೆಂಬ ಚಿಂತನೆಯೊಂದಿಗೆ 1994 ರಲ್ಲಿ "ಸಂಸ್ಕೃತ ಭಾರತಿ" ಎಂಬ ಹೆಸರಿನಿಂದ ನೋಂದಾಯಿಸಲಾಯಿತು. ಇಂದು ಅರುಣಾಚಲ ಪ್ರದೇಶ, ನಾಗಾಲಾಂಡ್, ಮಿಜೋರಾಂ, ಮೇಘಾಲಯಗಳನ್ನು ಹೊರತುಪಡಿಸಿ ದೇಶದ ಉಳಿದೆಲ್ಲ ಪ್ರಾಂತಗಳಲ್ಲಿ ಸಂಸ್ಕೃತ ಭಾರತೀಯ ಕಾರ್ಯ ಇದೆ  ಒಟ್ಟು 713 ಕಾರ್ಯಸ್ಥಾನಗಳು ಮತ್ತು 1342 ಸಂಪರ್ಕ ಸ್ಥಾನಗಳಿವೆ 105 ಪೂರ್ಣಾವಧಿ ಕಾರ್ಯಕರ್ತರು. ಸಂಸ್ಕೃತ ಭಾರತೀಯಲ್ಲಿ ಈಗ ಕೆಲಸ ಮಾಡುತ್ತಿದ್ದಾರೆ. ಇದಲ್ಲದೇ ಅಮೇರಿಕಾ, ಇಂಗ್ಲೇಂಡ್, ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ನ್ಯೂಜಲೆಂಡ್‌ಗಳಲ್ಲಿ ಸಂಸ್ಕೃತ ಭಾರತೀಯ ಚಟುವಟಿಕೆಗಳಿವೆ.

**ಸಂಭಾಷಣಾ ಸಂದೇಶ ಪತ್ರಿಕೆ:** ಸರಳ ಸಂಸ್ಕೃತದಲ್ಲಿ ಸಾಹಿತ್ಯಗಳ ನಿರ್ಮಾಣ ಆಗದಿರುವುದು ಸಂಸ್ಕೃತದಲ್ಲಿ ಒಂದು ಕೊರತೆಯೆಂದು ಹೇಳಬೇಕು. ಅಲ್ಲಿ ಸಂಸ್ಕೃತ ಕಲಿತವರಿಗೆ ಅಥವಾ ಸಂಸ್ಕೃತವನ್ನೇ ಅಧ್ಯಯನ ಮಾಡಿದವರಿಗೂ ಕೂಡಾ ಗುರುವಿನ ಸಹಾಯವಿಲ್ಲದಿದ್ದರೆ ಇನ್ನೊಂದು ಕಾವ್ಯವನ್ನು ಅರ್ಥೈಸಿಕೊಳ್ಳುವುದು ಕಠಿಣವೇ ಹಾಗಾಗಿ ಸಂಸ್ಕೃತವನ್ನು ಅಧ್ಯಯನ ಮಾಡಿದವರಿಗೆ ಹೊಸ ಸಾಹಿತ್ಯವನ್ನು ತಾವಾಗಿಯೇ ಓದಿಕೊಳ್ಳುವ ಅವಕಾಶವೇ ಇರಲಿಲ್ಲ. ಈ ಕೊರತೆಯನ್ನು ನೀಗಿಸಿರುವುದು ಸಂಸ್ಕೃತ ಭಾರತೀಯ ಸಂಭಾಷಾಣಾ ಸಂದೇಶ ಮಾಸಪತ್ರಿಕೆ 1994 ರಲ್ಲಿ ಪ್ರಾರಂಭವಾದ ಈ ಪತ್ರಿಕೆ ತನ್ನ ಪ್ರಚಾರವನ್ನು 12 ದೇಶಗಳಲ್ಲಿ ವಿಸ್ತರಿಸಿಕೊಂಡಿದೆ. ಇದೊಂದು ಕುಟುಂಬ ಪತ್ರಿಕೆ ಮನೆಯಲ್ಲಿನ ಪ್ರೌಢರು, ಮಹಿಳೆಯರು, ಮಕ್ಕಳು ಕೂಡಾ ಇಷ್ಟಪಡುವ ವಿಷಯಗಳು ಇದರಲ್ಲಿರುತ್ತದೆ. ಗಂಭೀರ ಲೇಖಗಳು, ಕಥೆಗಳು, ಧಾರವಾಹಿಗಳು, ಪದರಂಜನಿ, ಬಾಲಮೋದಿನಿ, ಭಾಷಾವಾರು, ಏಹಿ ಹಸಾಮ (ನಗೋಣ ಬನ್ನಿ) ಇತ್ಯಾದಿ ವಿಭಾಗಗಳಿಂದ ಸಮೃದ್ಧವಾಗಿರುವ ಪತ್ರಿಕೆಗೆ ಒಂದು ಲಕ್ಷಕ್ಕಿಂತಲೂ ಹೆಚ್ಚು ಓದುಗರಿದ್ದಾರೆ.

**ಪ್ರಕಾಶನ ವಿಭಾಗ:** ಸಂಸ್ಕೃತ ಭಾರತೀಯ ಪ್ರಕಾಶನ ವಿಭಾಗವು ಭಾಷಾ ವಿಷಯದ ವ್ಯಾಕರಣದ ಸಣ್ಣ ಹೊತ್ತಿಗೆಗಳನ್ನು ಹೊರ ತರುತ್ತಿದೆ. ಮೊದಮೊದಲು ಕನ್ನಡ ಭಾಷೆ ಸಂಸ್ಕೃತ ಭಾಷೆಯಲ್ಲಿ ಪುಸ್ತಕವನ್ನು ಹೊರತಂದಿದ್ದು. ಈಗ ದೇವನಾಗರಿ ಲಿಪಿಯಲ್ಲಿ ತರುತ್ತಿದೆ. ಸಂಸ್ಕೃತ ಭಾರತಿ ಹೊರತಂದಿರುವ ಸಂಧಿ, ಸಮಾಸ, ಶತೃ–ಶಾನಜ್ ಸಂಭಾಷಣಾ ಸೋಪಾನ ಇತ್ಯಾದಿ ಪುಸ್ತಕಗಳು ಜನ ಮೆಚ್ಚುಗೆಗಳಿಸಿದ್ದಲ್ಲಿ ಅನೇಕ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳಾಗಿ ಸ್ವೀಕೃತಗೊಂಡಿವೆ.

**ಆಧುನಿಕ ಸಾಹಿತ್ಯ ನಿರ್ಮಾಣ:** ಸಂಸ್ಕೃತಿ ಸೇವಾ ಯೋಜನೆ ಸಂಸ್ಕೃತಾನುರಾಗಿಗಳಿಗೆ ಓದುವುದಕ್ಕಾಗಿ ನೂತನ ಸಾಹಿತ್ಯವನ್ನು ಓದಿಸಬೇಕೆಂಬ ದೃಷ್ಟಿಯಿಂದ ಪ್ರಯತ್ನ ನಡೆದಿದ್ದು, ಈಗ ಆ ತರಹದ ಪುಸ್ತಕಗಳೂ ಬರುತ್ತಿವೆ. ಸಂಸ್ಕೃತ ಭಾಷೆಯಲ್ಲಿ ಸ್ವತಂತ್ರ ಸಾಹಿತ್ಯ ರಚನೆಯಾಗಿದೆ. ಪುಸ್ತಕ ರೂಪದಲ್ಲಿ ಬರುತ್ತದೆ. ಅಲ್ಲದೇ ಕನ್ನಡದ ಪ್ರಸಿದ್ಧ ಪುಸ್ತಕಗಳಾದ ಯುಗಾವಾತಾರ, ಧರ್ಮಶ್ರೀ, ಆವರಣ ಇತ್ಯಾದಿ ಪುಸ್ತಕಗಳೂ ಈಗ ಸಂಸ್ಕೃತದಲ್ಲಿ ಸುಲಭ ಬೆಲೆಯಲ್ಲಿ ಲಭ್ಯವಿವೆ. ಸರಸ್ವತಿ ಸೇವಾ ಯೋಜನೆ ಅಡಿಯಲ್ಲಿ ದೇಶದ ವಿವಿಧ ಭಾಷೆಗಳ ಉತ್ತಮ ಪುಸ್ತಕಗಳನ್ನು ಸಂಸ್ಕೃತಕ್ಕೆ ಅನುವಾದಿಸಿ ಹೊರತರಬೇಕೆಂಬ ಪ್ರಯತ್ನ ನಡೆದಿದೆ ದೇಶದ ಎಲ್ಲ ಪ್ರಮುಖ ಭಾಷೆಗಳಲ್ಲಿ ಬಂದಿರುವ ಶ್ರೀ ಗುರೂಜಿ ಸಮಗ್ರ ಸಂಪುಟದ ಅಖಂಡಗಳು ಸಂಸ್ಕೃತದಲ್ಲೂ ಲಭ್ಯವಿದ್ದು ಉಳಿದ ಖಂಡಗಳ ಅನುವಾದ ಕಾರ್ಯ ನಡೆದಿದೆ.

**ಪತ್ರಾಚಾರ ಸಂಸ್ಕೃತ:** ಮನೆಯಲ್ಲಿಯೇ ಕುಳಿತು ಸಂಸ್ಕೃತ ಕಲಿಯಬೇಕೆಂದು ಸಂಸ್ಕೃತ ಭಾರತಿ ಕಡೆಯಿಂದ ದೂರ ಶಿಕ್ಷಣದ ಮೂಲಕ (ಅಂಚೆ ಮೂಲಕ) ಸಂಸ್ಕೃತವನ್ನು ಕಲಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರವೇಶ ಪರಿಚಯ, ಶಿಕ್ಷಾ ಕೋವಿದ ಎಂಬ ನಾಲ್ಕು ಸ್ತರದ ಪರೀಕ್ಷೆಗಳನ್ನು ನಡೆಸಿ ಪ್ರಮಾಣ ಪತ್ರ ನೀಡಲಾಗುತ್ತದೆ. ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತಿ, ತಮಿಳು ಭಾಷೆಗಳಲ್ಲಿ ಈ ಪರೀಕ್ಷೆಗಳನ್ನು ಸ್ವೀಕರಿಸಬಹುದಾಗಿದ್ದು ಸದ್ಯದಲ್ಲಿಯೇ ತೆಲಗು ಭಾಷೆಯಲ್ಲಿಯೂ ಪರೀಕ್ಷೆಗಳು

ಪ್ರಾರಂಭ ಆಗಲಿವೆ. ವರ್ಷದಲ್ಲಿ 2 ಬಾರಿ ಈ ಪರೀಕ್ಷೆಗಳು ನಡೆಯತ್ತಿದ್ದು ಸಾವಿರಾರು ಜನರು ಈ ಪರೀಕ್ಷೆಗಳನ್ನು ಸ್ವೀಕರಿಸುತ್ತಿದ್ದಾರೆ.

**ಗೀತಾ ಶಿಕ್ಷಣ ಕಲ್ಯಾಣ:** ಈ ದೇಶದ ಜನ ಸಾಮಾನ್ಯರಲ್ಲಿ ಭಗವದ್ಗೀತೆಯನ್ನು ಮೂಲದಿಂದಲೇ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಪಡೆಯುವಂತಾಗಲು ಸಂಸ್ಕೃತ ಭಾರತಿ ಗೀತಾ ಶಿಕ್ಷಣ ಕೇಂದ್ರಗಳನ್ನು ಆರಂಭಿಸಿದೆ. ಇದು ಕೂಡಾ 4 ಹಂತಗಳ ಶಿಕ್ಷಣವಾಗಿದ್ದು ಪ್ರತಿ ಹಂತದಲ್ಲೂ ಪರೀಕ್ಷೆ ಹಾಗೂ ಪ್ರಮಾಣ ಪತ್ರ ವಿತರಣೆ ಇರುತ್ತದೆ. ಒಟ್ಟಾರೆ 18 ತಿಂಗಳ ಅವಧಿಯ ಶಿಕ್ಷಣ ಇದು ಸಂಸ್ಕೃತ ಭಾರತಿ ಇದಕ್ಕೆ ಪೂರಕವಾಗಿರುವ ಪಠ್ಯಪುಸ್ತಕಗಳನ್ನು ನಿರ್ಮಿಸಿದೆ.

**ಸಂವಾದ ಶಾಲಾ:** ಇದೊಂದು ವಿಶಿಷ್ಟವಾದ ಪ್ರಕಲ್ಪ ದೆಹಲಿಯಲ್ಲಿದೆ ಇಲ್ಲಿ ಸಂಸ್ಕೃತದಲ್ಲಿ ಮಾತನಾಡುವುದನ್ನು ಕಲಿಸಲಾಗುತ್ತದೆ. ಹದಿನಾಲ್ಕು ದಿನಗಳ ಆವಾಸಿಯ (ನಿವಾಸವಿದ್ದು ಕಲಿಯಬೇಕಾದ) ಪ್ರಶಿಕ್ಷಣವಿದು.

ಪ್ರತಿತಿಂಗಳು ಮೊದಲನೆಯ ಹಾಗೂ ಹದಿನಾರನೇ ತಾರೀಖಿನಂದು ಹೊಸ ತಂಡ ಶಿಕ್ಷಣ ಪ್ರಾರಂಭವಾಗುತ್ತದೆ. ಸಂಪೂರ್ಣ ಸಂಸ್ಕೃತದಲ್ಲಿ ಇರುವುದು ಇದರ ವಿಶೇಷತೆಗಳಲ್ಲಿ ಒಂದು. ಈವರೆಗೆ (ಮಾರ್ಚ 2010) 890 ಮಂದಿ ಇಲ್ಲಿಗೆ ಬಂದು ಸಂಸ್ಕೃತ ಸಂಭಾಷಣದ ಶಿಕ್ಷಣ ಪಡೆದಿದ್ದಾರೆ. 19 ದೇಶಗಳಿಂದ ಜನರು ಇಲ್ಲಿಗೆ ಬಂದು ಶಿಕ್ಷಣ ಪಡೆದಿದ್ದಾರೆ ವಿದೇಶಗಳಿಂದಲು  ಜನರೂ ಸಂಸ್ಕೃತ ಕಲಿಯಲು ಆಸಕ್ತಿಯಿಂದ ಬರುತ್ತಿದ್ದಾರೆಂಬುದು ಒಂದು ವಿಶೇಷ.

**ಶೈಕ್ಷಣಿಕ ಚಟುವಟಿಕೆಗಳು:–** ಸಂಭಾಷಣಾ ಶಿಬಿರಗಳು ಸಂಸ್ಕೃತ ಭಾರತೀಯ ಮೂಲಭೂತ ಕಾರ್ಯವಾಗಿವೆ. ಇದರ ಜೊತೆಯಲ್ಲಿ ಭಾಷಾಭೋಧನ ವರ್ಗಗಳು ವ್ಯಾಕರಣ ವರ್ಗಗಳು, ಆವಾಸೀಯ ಪ್ರಶಿಕ್ಷಣ ವರ್ಗಗಳು, ಸಪ್ತಾಹಿಕ ಮಿಲನಗಳು ಇತ್ಯಾದಿಗಳ ಮೂಲಕ ಸಂಭಾಷಣಾ ಶಿಬಿರಗಳಿಗೆ ಬಂದವರನ್ನು ನಿರಂತರವಾಗಿ ಸಂಪರ್ಕದಲ್ಲಿ ಉಳಿಸಿಕೊಂಡು ಇನ್ನಷ್ಟು ಹೆಚ್ಚಿನ ಪ್ರಗತಿ ಸಾಧಿಸುವಂತೆ ಅವರೆಲ್ಲ ಕಾರ್ಯಕರ್ತರಾಗುವಂತೆ ನಿರಂತರ ಚಟುವಟಿಕೆಗಳು ನಡೆಯುತ್ತಿವೆ.

ಸಂಸ್ಕೃತ ನಮ್ಮ ದೇಶದ ಭಾಷೆ ನಮ್ಮೆಲ್ಲರ ಭಾಷೆ, ಇಡೀ ದೇಶಾದ್ಯಾಂತ ಸಾಮಾನ್ಯವಾಗಿ ಅರ್ಥವಾಗಬಲ್ಲ ಸಮಾಜದ ಎಲ್ಲ ವರ್ಗಗಳ ಗೌರವಾದರಗಳಿಗೆ ಪಾತ್ರವಾಗಿರುವ ಭಾಷೆ ಸಂಸ್ಕೃತ. ಈ ದೇಶದ ಉಳಿದೆಲ್ಲ ಭಾಷೆಗಳೂ ಸಂಸ್ಕೃತದಿಂದಲೇ ಪುಷ್ಟಿಯನ್ನು, ಸೌಂದರ್ಯವನ್ನು, ಶಬ್ದಸಂಪತ್ತನ್ನು, ವ್ಯಾಕರಣ ಸಂಪತ್ತನ್ನು, ಶಾಸ್ತ್ರಶುದ್ಧತೆಯನ್ನು ಪಡೆದಿವೆ. ಸಂಸ್ಕೃತದಲ್ಲಿರುವ ಶಬ್ಧಸಂಪತ್ತು, ವಿಜ್ಞಾನ ಸಂಪತ್ತು, ವಿಚಾರ ಸಂಪತ್ತು, ಜಗತ್ತಿನ ಇನ್ನಾವ ಭಾಷೆಯಲ್ಲಿ ಇಲ್ಲ ಎಂದು ಧೈರ್ಯದಿಂದ ಹೇಳಬಹುದು. ಆದರೆ ಬ್ರಿಟಿಷರ ಆಡಳಿತ ಇದ್ದಾಗ ಅವರು ಸಂಸ್ಕೃತವನ್ನು ಕಡೆಗಣಿಸಿ ಆ ಸ್ಥಾನದಲ್ಲಿ ಇಂಗ್ಲೀಷ ಭಾಷೆಯನ್ನು ಪ್ರತಿಷ್ಠಾಪಿಸಿದರು. ದೇಶ ಸ್ವತಂತ್ರವಾದ ನಂತರ ಅಧಿಕಾರ ಹಿಡಿದ ನಮ್ಮವರು ಆಂಗ್ಲ ಭಾಷೆಗೆ ಮಹತ್ವ ಕೊಟ್ಟು ಸಂಸ್ಕೃತವನ್ನು ಕಡೆಗಣಿಸಿದ್ದರ ಪರಿಣಾಮ ನಾವಿಂದೂ ನಮ್ಮ ಆ ಪ್ರಾಚೀನ ಭಾಷೆಯಿಂದ ದೂರವಾಗಿದ್ದೇವೆ. ಅದರ ಪರಿಣಾಮವಾಗಿ ಆ ಭಾಷೆಯಲ್ಲಿರುವ ಜ್ಞಾನ–ವಿಜ್ಞಾನದಿಂದಲೂ ದೂರವಾಗಿದ್ದೇವೆ. ಜನರ ಮನಸ್ಸಿನಲ್ಲಿ ಮತ್ತೊಮ್ಮೆ ಸಂಸ್ಕೃತದ ಬಗ್ಗೆ ಅಭಿಮಾನ, ಸಂಸ್ಕೃತವನ್ನು ಕಲಿಯಬೇಕೆಂಬ ಭಾವನೆ ಬಿತ್ತಿದ್ದಾಗ ಮಾತ್ರ ನಾವು ನಮ್ಮ ಪ್ರಾಚೀನ ಜ್ಞಾನ ಭಂಡಾರವನ್ನು ತಿಳಿಯಬಲ್ಲೆವೆಂಬ ಕಾರಣಕ್ಕಾಗಿಯೇ ಸಂಸ್ಕೃತವನ್ನು ಸಾರ್ವತ್ರಿಕವಾಗಿ ಕಲಿಸುವ ಸಂಸ್ಕೃತವನ್ನು ವ್ಯವಹಾರದಲ್ಲಿ ತರುವ ಆಂದೋಲನಕ್ಕೆ ಸಂಸ್ಕೃತ ಭಾರತಿ ನಿರಂತರವಾಗಿ ಪ್ರಯತ್ನಿಸುತ್ತಿದೆ.

## ಸಂಸ್ಕೃತಿ:

"ಭಾರತಸ್ಯ ಪ್ರತಿಷ್ಠೆ ದ್ವೇ ಸಂಸ್ಕೃತಂ ತಥಾ ಸಂಸ್ಕೃತಿಸ್ತಥಾ" "ನಮ್ಮ ಭಾರತದೇಶದ ಗೌರವವನ್ನು ಹೆಚ್ಚಿಸುವ ಎರಡು ವಿಷಯಗಳಲ್ಲಿ ಮೊದಲನೆಯದು ಸಂಸ್ಕೃತ ಭಾಷೆ ಮತ್ತು ಸನಾತನವಾದ ನಮ್ಮ ಸಂಸ್ಕೃತಿ. ಭಾರತೀಯ ಸಂಸ್ಕೃತಿ ವಿಶ್ವಾದ್ಯಾಂತ ಮನ್ನಣೆ ಪಡೆದ ಸಂಸ್ಕೃತಿಯಾಗಿದೆ. ವಿಶ್ವದ ಅತ್ಯಂತ ಪ್ರಾಚೀನ ಸಂಸ್ಕೃತಿಯಾಗಿ ಕಂಡು ಬರುತ್ತದೆ. ಅನೇಕ ಧರ್ಮಗಳು ಮತಗಳು ಸಂಪ್ರದಾಯಗಳು ಅನೇಕ ರೀತಿಯ ಆಚರಣೆಗಳಿಗೆ ಸೇರಿದ ಜನರು ಇಲ್ಲಿ ವಾಸಮಾಡುತ್ತಾರೆ. ಹೀಗೆ ವಿವಿಧತೆಯಲ್ಲಿ ಏಕತೆಯನ್ನು ಕಂಡ ದೇಶ ನಮ್ಮ ಭಾರತ.

ಉದಾಹರಣೆಗೆ: ಸ್ವಾಮಿವಿವೇಕಾನಂದರ 1893 ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣ ನೆನಪಾಗುತ್ತಿದೆ. ಸಮ್ಮೇಳನದಲ್ಲಿ ಅಮೇರಿಕಾದ ನನ್ನ ಸಹೋದರ ಸಹೋದರಿಯರೇ ಎಂದು ಸಂಭೋಧಿಸಿದ ತಕ್ಷಣವೇ ಮೂರು ನಿಮಿಷಗಳ  ಚಪ್ಪಾಳೆಯ ಸುರಿಮಳೆಯಾಗಿತ್ತು. ಅದು ನಮ್ಮ ಭಾರತದ ಸಂಸ್ಕೃತಿಗೆ ಎಷ್ಟು ಗೌರವ ಇತ್ತು ಅಂತಾ ನಮಗೆ ತಿಳಿಯುತ್ತದೆ. ಸಮ್ಮೇಳನದ ನಂತರ ಅಮೇರಿಕಾದ ಒಬ್ಬ ಮಹಿಳೆ ವಿವೇಕಾನಂದರನ್ನು ಪ್ರಶ್ನಿಸಿದಳಂತೆ ನೀವು ಯಾಕೆ ಭಾರತದಲ್ಲಿ ಮಹಿಳೆಯನ್ನು ಹಸ್ತಲಾಘವ ಮಾಡುವುದಿಲ್ಲ. ಎಂದು ಕೇಳಿದಳಂತೆ ಆಗ ವಿವೇಕಾನಂದರು ಅವರಿಗೆ ಮರು ಪ್ರಶ್ನಿಸಿದ್ದರಂತೆ ನೀವು ನಿಮ್ಮ ರಾಣಿಯಾದ 'ಎಲಿಜಿಬೆತ್' ಗೆ ಯಾವಾಗಾಲಾದರೂ ಹಸ್ತ ಲಘಾವ

ಮಾಡಿದ್ದೀರಾ ಎಂದು! ಅದನ್ನು ಕೇಳಿದ ಆ ಮಹಿಳೆ ಇಲ್ಲ ಇಲ್ಲ.. ಅವರು ನಮ್ಮ ದೇಶದ ರಾಣಿ ಅತ್ಯಂತ ಶ್ರೇಷ್ಠರು ಅವರನ್ನು ನಾವು ಸ್ಪರ್ಶಿಸುವುದೇ ಎಂದಳಂತೆ: ಆಗ ವಿವೇಕಾನಂದರು ನಮ್ಮ ದೇಶದಲ್ಲಿರುವ ಪ್ರತಿಯೊಬ್ಬ ಹೆಣ್ಣು ಮಕ್ಕಳು ನಮಗೆ ರಾಣಿಯರಂತೆ ಎಂದು ಉತ್ತರ ಕೊಟ್ಟಾಗ ನಮ್ಮ ಸಂಸ್ಕೃತಿಗೆ ಅವರ ಕೊಟ್ಟ ಗೌರವ ಅಪಾರ.

ನಮ್ಮ ಭಾರತವು ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯ ಭೂಮಿಯಾಗಿತ್ತು ಇಲ್ಲಿ ವಾಸಿಸುವ ಜನರು ಮಾನವೀಯತೆ ಉದಾರತೆ, ಏಕತೆ, ಜಾತ್ಯಾತೀತತೆ ಬಲವಾದ ಸಾಮಾಜಿಕ ಸಂಬಂಧಗಳು ಮತ್ತು ಇತರೆ ಎಲ್ಲ ಉತ್ತಮಗುಣಗಳು ನಮ್ಮ ದೇಶದಲ್ಲಿ ಇದ್ದವು. ಹೀಗೆ ಇರುವಾಗ ನಮ್ಮ ದೇಶಕ್ಕೆ 1835 ರಲ್ಲಿ ಈಸ್ಟ ಇಂಡಿಯಾ ಕಂಪನಿಯು ಭಾರತವನ್ನು ಆಳುತ್ತಿರುವಾಗ ಬ್ರಟೀಷ್ ವೈಸರಾಯ್ ಆಗಿದ್ದ ಲಾರ್ಡ ಮೆಕಾಲೆ ಭಾರತೀಯ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಇಡೀ ಭಾರತವನ್ನು ಪ್ರವಾಸ ಮಾಡಿದ್ದರಂತೆ ಆಗ ಇವರಿಗೆ ಭಾರತದ ಸಂಸ್ಕೃತಿಯನ್ನು ನೋಡಿ ಆಶ್ಚರ್ಯವಾಗಿತಂತೆ ಏಕೆಂದರೆ ಭಾರತದಲ್ಲಿ ಒಬ್ಬನೆ ಕಳ್ಳ–ಸುಳ್ಳ, ಡಕಾಯತ, ಮೋಸಗಾರ, ಅಹಂಕಾರಿ ಒಟ್ಟಾರೆಯಾಗಿ ದುಷ್ಟ ಮಾನವರು ಅವರಿಗೆ ಸಿಗಲಿಲ್ಲವಂತೆ ಯಾಕೆಂದರೆ ಆವತ್ತಿನ ನಮ್ಮ ಶಿಕ್ಷಣ ಪದ್ಧತಿ ಗುರುಕುಲ ಪದ್ದಿಯಾಗಿತ್ತು ಗುರುಕುಲದಲ್ಲಿ ಎಲ್ಲಾ ರೀತಿಯ ಶಿಕ್ಷಣವನ್ನು ನಮ್ಮ ಭಾರತಿಯರು ಪಡೆಯುತ್ತಿದ್ದರು. ಆ ಶಿಕ್ಷಣ ಸಂಸ್ಕಾರ ಪ್ರಧಾನವಾದ ಪದ್ದತಿಯಿಂದಲೇ ನಮ್ಮ ಭಾರತದ ಸಂಸ್ಕೃತಿಯ ಅಗ್ರಗಣ್ಯವಾಗಿತ್ತು. ಇವೆಲ್ಲವನ್ನು ಗಮನಿಸಿ ಲಾರ್ಡ ಮಕಾಲೆ 2–2–1835 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ಗೆ ಪತ್ರ ಬರರಂತೆ. ಆ ಪತ್ರದ ಒಂದು ಪಕ್ಷಿನೋಟ.....

**ಭಾರತೀಯ ಶಿಕ್ಷಣ ವ್ಯವಸ್ಥೆಯ ನಾಶ :==>**




ಅದರ ಪ್ರಭಾವವೇ ನಾವು ಇಂದು ಓದುತ್ತಿರುವ ಶಿಕ್ಷಣ ಪದ್ಧತಿಯಾಗಿದೆ. ಆವತ್ತಿನಿಂದ ಸಂಸ್ಕೃತ ಮಾಯವಾಗುತ್ತಾ ಇಂಗ್ಲೀಷಿನ ಅಧ್ಯಯನ ಪ್ರಾರಂಭವಾಯಿತು ಇಂಗ್ಲೀಷರ ಸಂಸ್ಕೃತಿಯ ಪ್ರಭಾವವು ನಮ್ಮ ಮೇಲೆ ಆಯಿತು. ಇದೆಲ್ಲವನ್ನು ನಾವು ಸರಿಪಡಿಸಿಕೊಳ್ಳಬೇಕೆಂದರೆ ನಮ್ಮ ಶಿಕ್ಷಣ ಪದ್ದತಿ ಬದಲಾಗಬೇಕು. ಸಂಸ್ಕೃತದ ಅಧ್ಯಯನ ಕೂಡಾ ನಿರಂತರವಾಗಬೇಕು.

**"ಸಾ ವಿದ್ಯೆಯಾ ವಿಮುಕ್ತಯೇ"**

ಯಾವ ವಿದ್ಯೆಯಿಂದ ನಾವು ಸಮಸ್ಯೆಯಿಂದ ಮುಕ್ತರಾಗುತ್ತೆವೆವೋ ಅದೇ ನಿಜವಾದ ವಿದ್ಯೆ.

**ಸಂಸ್ಕಾರ:**

**"ಸಂಸ್ಕಾರಹೀನಃ ಪಶುಭಿಃ ಸಮಾನಃ"** ಸಂಸ್ಕಾರವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂಬ ಮಾತು ಪ್ರತಿಯೊಬ್ಬನಿಗೂ ಜೀವನದಲ್ಲಿ ಸಂಸ್ಕಾರ ಎಷ್ಟು ಮುಖ್ಯ ಎಂಬುದನ್ನು ತಿಳಿಸುತ್ತದೆ. ಆದ್ದರಿಂದ ಸಂಸ್ಕಾರವೆಂಬುದು

ಪ್ರತಿಯೊಬ್ಬನಿಗೂ ಜೀವನದಲ್ಲಿ ಅನಿವಾರ್ಯ ಹಾಗೂ ಅದು ಬಾಲ್ಯದಲ್ಲಿಯೇ ಸಿಗಬೇಕು ಮತ್ತು ಅದಕ್ಕೆ ಅನುಕೂಲವಾದ ವಾತಾವರಣವನ್ನು ಪಾಲಕರು ಒದಗಿಸಿಕೊಡಬೇಕು. ಅನ್ಯ ಜನಾಂಗಗಳಲ್ಲಿ ಮಾನವವನು ದೇವರಾಗಬೇಕೆಂದು ಆಶಿಸದಿದ್ದರೂ ಅವನನ್ನು ಉತ್ತಮ ಮಾನವನನ್ನಾಗಿ ಮಾಡಲು ಹಲವು ಸಂಸ್ಕಾರಗಳಿವೆ. ಒಟ್ಟಿನಲ್ಲಿ ಜೀವಿಯನ್ನು ಉತ್ತಮ ಗೊಳಿಸುವ ಕಾರ್ಯಗಳಿಗೆ ಸಂಸ್ಕಾರ ಎನ್ನುತ್ತಾರೆ.

**"ಯದ್ಯದಾಚರತಿ ಶ್ರೇಷ್ಠಃ ತತ್ತದೇವಪೀತರೋ ಜನಃ"** ತಮಗಿಂತ ಹಿರಿಯರೂ ಏನೆಲ್ಲಾ ಮಾಡುತ್ತಾರೋ ಅದನ್ನು ಮಕ್ಕಳು ಕೂಡಾ ಅನುಸರಿಸುತ್ತಾರೆ ಎಂಬ ಗೀತಾಚಾರ್ಯ ಶ್ರೀ ಕೃಷ್ಣನ ಉಕ್ತಿಯಂತೆ ಮನೆಯಲ್ಲಿ ಮೊದಲು ಪೋಷಕರು ಸಂಸ್ಕಾರ ಪೂರ್ಣ ಜೀವನವನ್ನು ನಡೆಸಿ ತೋರಿಸಬೇಕು. ನಂತರ ಮಕ್ಕಳಿಗೂ ಅದನ್ನು ತಿಳಿಹೇಳಿದರೆ ಖಂಡಿತವಾಗಿಯೂ ಅವರು ಅದರಂತೆಯೇ ನಡೆದುಕೊಳ್ಳುತ್ತಾರೆ. ಮಗುವಿಗೆ ಸಂಸ್ಕಾರ ಮನೆಯಿಂದಲೇ ಆರಂಭವಾಗುತ್ತದೆ. ಆದ್ದರಿಂದ ಆದಷ್ಟು ಎಚ್ಚರವಹಿಸಿ ಅವರಿಗೆ ಸಂಸ್ಕಾರ ಶಿಕ್ಷಣ ಕೊಡುವತ್ತ ಗಮನ ಹರಿಸಬೇಕು. ಪರಿಶುದ್ಧವಾದ ಮನಸ್ಸಿಗಾಗಿ ಸುಗಂಧಲೇಪಿಸಿ ಸ್ನಾನಾದಿ ಸಂಸ್ಕಾರಗಳು ನಮ್ಮ ಶರೀರವನ್ನು ಹೇಗೆ ಶುದ್ಧಿಗೊಳಿಸುವವೋ, ಹಾಗೆ ಒಳ್ಳೆಯ ವಿಚಾರಗಳು ನಮ್ಮ ಮನಸ್ಸು ಹಾಗೂ ಆತ್ಮಗಳಿಗೆ ಸಂಸ್ಕಾರವನ್ನು ಕೊಡುವುದರ ಮೂಲಕ ಶುದ್ಧಗೊಳಿಸಬೇಕು. ಹೀಗೆ ಸುಸಂಸ್ಕೃತಗೊಂಡ ಮನಸ್ಸು ಭವಿಷ್ಯದಲ್ಲಿ ಎಲ್ಲ ಒಳಿತುಗಳನ್ನು ಸ್ವೀಕರಿಸಲು ಹಾಗೂ ಒಳ್ಳೆಯ ವಿಚಾರಗಳನ್ನು ಚಿಂತಿಸಲು ಸಿದ್ಧವಾಗುತ್ತದೆ.

ಉದಾಹರಣೆಗೆ ನಾವು ಹಾಲನ್ನು ತೆಗೆದುಕೊಂಡರೆ ಹಾಲನ್ನು ಕಾಯಿಸಿ ನಾವು ಹಾಳಾಗದಂತೆ ಬಹಳ ಅಂದರೆ 4 ದಿನಗಳವರೆಗೆ ಸಂರಕ್ಷಿಸಬಹುದು. ಆದರೆ ನಾವು ಹೆಪ್ಪು ಎಂಬ ಸಂಸ್ಕಾರ ಕೊಟ್ಟಾಗ ಅದರ ಆಯುಷ್ಯ ವೃದ್ಧಿಸುತ್ತದೆ. ನಂತರ ಮೊಸರಿಗೆ ಮಂಥನ ಮಾಡಿದರೆ ಮೊಸರು ಬೆಣ್ಣೆಯಾಗುತ್ತದೆ. ಬೆಣ್ಣೆ ತುಪ್ಪವಾಗುತ್ತದೆ. ಅದೇ ಹಾಲಿನಿಂದ ಬಂದ ತುಪ್ಪಕ್ಕೆ ಯಾವುದೇ Expiry Date ಇರುವುದಿಲ್ಲ. ಹೀಗೆ ಹಾಲಿನಂತೆ ಮನುಷ್ಯ ತನ್ನ ಜೀವಿತಾ ಅವಧಿಯಲ್ಲಿ ಹಂತಹಂತವಾಗಿ ಸಂಸ್ಕಾರಯುತನಾಗಿ ಬಾಳಬೇಕು. ಹಾಗಾದಾಗ ಮನುಷ್ಯನನ್ನು ಯಾರು ಕಡೆಗಣಿಸುವುದಿಲ್ಲ ಎಲ್ಲ ಕಡೆಯಲ್ಲೂ ಮನ್ನಣೆ, ಗೌರವಾದರಳಿಗೆ ಒಳಗಾಗುತ್ತಾನೆ.

**ಉಪಸಂಹಾರ:**

ಒಟ್ಟಾರೆಯಾಗಿ ನಾವು ತಿಳಿಯುವುದೇನೆಂದರೆ **ಸಂಸ್ಕೃತ–ಸಂಸ್ಕೃತಿ–ಸಂಸ್ಕಾರ** ಒಂದನೊಂದು ಅವಲಂಬಿಸಿವೆ ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬರೂ ಈ ಭಾಷೆಯನ್ನು ಅಧ್ಯಯನ ಮಾಡಬೇಕು. ಸಂಸ್ಕೃತ ಪ್ರತಿಯೊಬ್ಬ ಭಾರತೀಯನ ಭಾಷೆಯೇ ಹೊರತು ಯಾವುದೇ ಒಂದು ರಾಜ್ಯ ಮತ ಜಾತಿಗೆ ಜನಾಂಗಕ್ಕೆ ಸೀಮಿತವಾದ ಭಾಷೆಯಲ್ಲ ಭಾರತೀಯರು ಅಷ್ಟೇ ಅಲ್ಲದೇ ದೇಶ ವಿದೇಶಗಳ ಜನರು ಕೂಡ ಇಂದು ಸಂಸ್ಕೃತವನ್ನು ಅಧ್ಯಯನ ಮಾಡುವ ಉತ್ಸಾಹ ತೋರುತ್ತಿದ್ದಾರೆ. ಈ ಭಾಷೆಯ ಅಧ್ಯಯನ ಮಾಡುವುದರಿಂದ ಭಾರತದ ಅಮೂಲ್ಯ ಭಾಷೆಯೊಂದರ ಸಂಪೂರ್ಣ ಪರಿಚಯ ಪಡೆದ ಪ್ರಯೋಜನವಾಗುತ್ತದೆ. ಈ ಭಾಷೆಯ ಮೂಲಕ ನಾವು ಯಾವುದೇ ಭಾರತೀಯ ಭಾಷೆಗಳನ್ನು ಬಹಳ ಸುಲಭವಾಗಿ ಕಲಿಯಬಹುದು. ಭಾಷೆಯ ಜೊತೆಗೆ ಭಾರತದ ಗರಿಮೆ ತಂದೆ–ತಾಯಿ ಗುರುಹಿರಿಯರ ಬಗ್ಗೆ ಗೌರವ, ದೀನರಲ್ಲಿ ಅನುಕಂಪ ಹಾಗೂ ದಯಾ ಗುಣ ಬದುಕಿನ ಬ್ಗಗೆ ಪ್ರೀತಿ, ಆತ್ಮಸ್ಥೈರ್ಯ, ಪರಸ್ಪರ ಸೌಹಾರ್ದಗುಣ ಶಿಸ್ತು, ಸಂಯಮ ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಮಾತೃ ಭೂಮಿಯ ಬಗ್ಗೆ ಅಭಿಮಾನ, ದೇಶಭಕ್ತಿ ಮುಂತಾದ ಉದಾತ್ತ ಭಾವನೆಗಳು ಸಂಸ್ಕಾರ ಪೂರ್ಣ ಸ್ವಸ್ಥಸಮಾಜನಿರ್ಮಾಣದ ಕನಸ್ಸು ನನಸಾಗಲು ಸಾಧ್ಯವಾಗುತ್ತದೆ.

**"ಜಯತು ಸಂಸ್ಕೃತಂ ಜಯತು ಮನುಕುಲಂ"**

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/